## ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

## ಸಿ ಸಿ ನಂ. 452/2020

ದಿಃ **04 - 07-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

| | | | |
|---|---|---|---|
| ಹೆಸರು | ನವೀನ್ ಕುಮಾರ್ | ಸಿ.ಡಬ್ಲ್ಯು | **05** |
| ವಯಸ್ಸು | 51 ವರ್ಷ | ಪಿ.ಡಬ್ಲ್ಯು: | **01** |
| ತಂದೆಯ ಹೆಸರು | ದಾಮೋದರ ಕೆ | | |
| ವೃತ್ತಿ | ಅಬಕಾರಿ ನಿರೀಕ್ಷಕರು | | |
| ವಾಸಸ್ಥಳ | ವಿಠ್ಲಾ ಗ್ರಾಮ ಬಂಟ್ವಾಳಾ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ | | |

ಮುಖ್ಯ ವಿಚಾರಣೆಃಃ ಶ್ರೀ ಸರ್ಕಾರಿ ಅಭಿಯೋಜಕರಿಂದಃ

ನಾನು ದಿನಾಂಕ 05-04-2018 ರಿಂದ 22-11-2018 ರವರೆಗೆ ಚಿಕ್ಕಬಳ್ಳಾಪುರ ಉಪ ವಿಭಾಗದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 29-09-2018 ರಂದು ಅಪರಾಹ್ನ ಹೊಸೂರು ಗ್ರಾಮದಲ್ಲಿ ಇಲಾಖಾ ಸಿಬ್ಬಂಧಿಗಳೊಂದಿಗೆ ಇಲಾಖಾ ವಾಹನ ನೊಂದಣಿ ಸಂಖ್ಯೆ ಕೆಎ 40 540 ರ ವಾಹನದಲ್ಲಿ ಗಸ್ತು ಕಾರ್ಯ ನಿರ್ವಹಿಸುತ್ತಿದ್ದಾಗ ಹೊಸೂರಿನ ರಾಮಚಂದ್ರಪ್ಪ ಬಿನ್ ಹನುಮಂತಪ್ಪ ಎಂಬುವವರು ತನ್ನ ಅಂಗಡಿ- ಮನೆಯಲ್ಲಿ ಅಕ್ರಮವಾಗಿ ಮಧ್ಯವನ್ನು ಹೊಂದಿ ಮಾರಾಟ ಮಾಡುತ್ತಿದ್ದಾನೆ ಎಂಬ ಮಾಹಿತಿ ನನಗೆ ಬಂದಿರುತ್ತದೆ. ತಕ್ಷಣ ನಾನು ಹೊಸೂರು ಬಸ್ ನಿಲ್ದಾಣಕ್ಕೆ ಬಂದು ನನಗೆ ಬಂದ ಮಾಹಿತಿಯನ್ನು ಅಲ್ಲಿದ್ದ ಸಾರ್ವ ಜನಿಕರಿಗೆ ತಿಳಿಸಿ ಅಲ್ಲಿ ಇಬ್ಬರು ಆಸಾಮಿಗಳು ಎಂದರೆ ಚಾ.ಸಾ 3 ಮತ್ತು 4 ರವರು ಪಂಚರಾಗಿ ಸಹಕರಿಸಲು ಒಪ್ಪಿಕೊಂಡರು. ನಂತರ ಚಾ.ಸಾ 3 ಮತ್ತು 4 ರವರನ್ನು ಕರೆದುಕೊಂಡು ಹೊಸೂರಿನಲ್ಲಿರುವ ರಾಮಚಂದ್ರಪ್ಪರವರ ಮನೆ-ಅಂಗಡಿಗೆ ಹೊದೆವು. ಸದರಿ ಅಂಗಡಿಯನ್ನು ಶೋಧಿಸಲು ನ್ಯಾಯಾಲಯದಿಂದ ವಾರೆಂಟ್ ಅನ್ನು ಪಡೆಯಲು ಕಾಲಾವಕಾಶ ಇಲ್ಲದಿದ್ದ ಕಾರಣ ಸ್ಥಳದಲ್ಲಿಯೇ ಶೋಧನಾ ಸಮುಚ್ಚಿತ ಆಧಾರವನ್ನು ತಯಾರಿಸಿದೆವು. **(ಈ ಹಂತದಲ್ಲಿ ನ್ಯಾಯಾಲಯದ ಕಡತವನ್ನು ಪರಿಶೀಲಿಸಿದಾಗ ಶೋಧನಾ ಸಮುಚ್ಚಿತ ಆಧಾರದ ಅಸಲಿ ಪ್ರತಿಯು ಕಡತದಲ್ಲಿ ಇಲ್ಲದಿರುವುದು ಕಂಡುಬಂದಿರುತ್ತದೆ. ಆದರೆ ಶೋಧನಾ ಸಮುಚ್ಚಿತ ಆಧಾರದ ಪೋಟೋ ಕಾಪಿಯು ಕಡತದಲ್ಲಿ ಇರುತ್ತದೆ.)**

ನಂತರ ನಮ್ಮ ಇಲಾಖೆಯ ವಾಹನ ಚಾಲಕನಾದ ಚಾ.ಸಾ 1 ರವರನ್ನು ಒಳಕ್ಕೆ ಕಳುಹಿಸಿ ಪರಿಶೀಲಿಸಲು ತಿಳಿಸಲಾಯಿತು. ಸದರಿ ಅಂಗಡಿಯ ಬಾಗಿಲಿನ ಮೇಲಿರುವ ಸಜ್ಜಾದ ಮೇಲೆ ಒಂದು ಮಹಾ ಸಿಮೆಂಟ್ ಕಂಪನಿಯ ಪ್ಲಾಸ್ಟಿಕ್ ಚೀಲ ಇರುವುದು ಕಂಡುಬಂದಿತು. ಸದರಿ ಚೀಲವನ್ನು ಬಿಚ್ಚಿ ಪರಿಶೀಲಿಸಿದಾಗ ಅದರಲ್ಲಿ 90 ಎಂ.ಎಲ್ ನ 34 Haywards cheers Whiskey ಯ ಟೆಟ್ರಾ ಪ್ಯಾಕೆಟ್ ಗಳು ಪತ್ತೆಯಾದವು. ಈ ಬಗ್ಗೆ ರಾಮಚಂದ್ರಪ್ಪ ಬಿನ್ ಹನುಮಂತಪ್ಪ ಅವರನ್ನು ವಿಚಾರಿಸಿದಾಗ ಸದರಿ ಮಧ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ಹೊಂದಿರುವುದಾಗಿ ತಿಳಿಸಿದರು. ಸದರಿ ಎಲ್ಲಾ ಮಧ್ಯವನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿಗಳಾಗಿ ತೆಗೆದುಕೊಂಡು ಒಂದು ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಅರಗಿನಿಂದ ಇಲಾಖಾ ಮೊಹರನ್ನು ಹಾಕಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಬಿಳಿ ಬಣ್ಣದ ಬ್ಯಾಗ್ ಅನ್ನು ನೋಡಿ ಅದರೊಳಗಿರುವ ಟೆಟ್ರಾ ಪ್ಯಾಕೆಟ್ಗಳನ್ನು ಗುರುತಿಸಿದ್ದು ಸದರಿ ಟೆಟ್ರಾ ಪ್ಯಾಕೆಟ್ಗಳನ್ನು ಮುದ್ದೆ ಮಾಲು 1 ರಿಂದ 34 ಎಂದು ಗುರುತಿಸಲಾಯಿತು ಹಾಗೂ ಬಿಳಿ ಬಟ್ಟೆಯ ಮೇಲೆ ಅಂಟಿಸಿರುವ ಮಾದರಿ ಚೀಟಿಯ ಮೇಲೆ ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ಮು.ಮಾ 1 ಎ ಎಂದು ಗುರುತಿಸಲಾಯಿತು.

ನಂತರ ಸದರಿ ಮಧ್ಯವನ್ನು ಅಕ್ರಮವಾಗಿ ಹೊಂದುವುದು ಹಾಗೂ ಮಾರಾಟ ಮಾಡುವುದು ಅಬಕಾರಿ ಕಾಯ್ದೆ ಯ ಉಲ್ಲಂಘನೆ ಎಂದು ಆರೋಪಿಗೆ ತಿಳಿಸಲಾಯಿತು ಹಾಗೂ ಅವರನ್ನು ಬಂಧಿಸುವುದಾಗಿ ಅವರಿಗೆ ದಸ್ತಗಿರಿ ನೋಟೀಸ್ ಅನ್ನು ನೀಡಲಾಯಿತು ಹಾಗೂ ಅವರ ಸಂಬಂಧಿಕರಾದ ರಾಜಲಕ್ಷ್ಮಿ ರವರಿಗೆ ದೂರವಾಣಿ ಮೂಲಕ ಕರೆ ಮಾಡಿ ವಿಷಯವನ್ನು ತಿಳಿಸಲಾಯಿತು. ಸಾಕ್ಷಿಯು ದಸ್ತಗಿರಿ ನೋಟಿಸ್ ಹಾಗೂ ತಿಳುವಳಿಕೆ ನೋಟಿಸ್ ನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಆದರೆ ನ್ಯಾಯಾಲಯದ ಕಡತದಲ್ಲಿ ದಸ್ತಗಿರಿ ನೋಟಿಸ್ ಹಾಗೂ ತಿಳುವಳಿಕೆ ನೋಟಿಸಿನ ಅಸಲಿ ಪ್ರತಿಗಳು ಇರುವುದಿಲ್ಲ, ಪೋಟೋ ಕಾಪಿಗಳು ಮಾತ್ರ ಇರುತ್ತದೆ.

ನಂತರ ಸ್ಥಳದಲ್ಲಿ ಮಧ್ಯಾಹ್ನ 01.00 ಗಂಟೆಯಿಂದ 02.20 ರವರೆಗೆ ಮಹಜರ್ ಅನ್ನು ಜರುಗಿಸಲಾಯಿತು. ಸಾಕ್ಷಿಯು ದಿನಾಂಕ 29-09-2018 ರ ಪಂಚನಾಮೆಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ-1 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನಂತರ ಮುದ್ದೆ ಮಾಲು ಹಾಗೂ ಆರೋಪಿಯನ್ನು ಕಛೇರಿಗೆ ಕರೆತಂದು ಪ್ರಕರಣವನ್ನು

ದಾಖಲಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ-2 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ನಂತರ ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರಾಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರಿಗೆ ವಶಪಡಿಸಿಕೊಂಡಿರುವ ವಸ್ತುಗಳ ಪಟ್ಟಿಯನ್ನು ಕಳುಹಿಸಲಾಯಿತು. ಸಾಕ್ಷಿಯು ದಿನಾಂಕ 29-09-2018 ರ ವಸ್ತುಗಳ ಪಟ್ಟಿಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ವಸ್ತುಗಳ ಪಟ್ಟಿಯನ್ನು ನಿಪಿ-3 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ನಂತರ ಆರೋಪಿಯ ವೈದ್ಯಕೀಯ ತಪಾಸಣೆಯನ್ನು ಗೌರಿಬಿದನೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ನೆರವೇರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ ರಿಮ್ಯಾಂಡ್ ಅರ್ಜಿಯನ್ನು ಸಲ್ಲಿಸಿರುತ್ತೇವೆ. ಸಾಕ್ಷಿಯು ದಿನಾಂಕ 29-09-2018 ರ ರಿಮ್ಯಾಂಡ್ ಅರ್ಜಿಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ರಿಮ್ಯಾಂಡ್ ಅರ್ಜಿಯನ್ನು ನಿಪಿ-4 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು.

ನಂತರ ದಿನಾಂಕ 15-11-2018 ರಂದು ಚಾ.ಸಾ 2 ರವರ ಮೂಲಕ ವಶಪಡಿಸಿಕೊಂಡ ಮುದ್ದೆ ಮಾಲುಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಬೆಂಗಳೂರಿಗೆ ಕಳುಹಿಸಿ ಕೊಟ್ಟಿರುತ್ತೇನೆ. ನಂತರ ಸಾಕ್ಷಿ ಚಾ.ಸಾ 1 ರಿಂದ 4 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 22-11-2018 ರಂದು ನಾನು ವರ್ಗಾವಣೆಯಾದ ಕಾರಣ ಮುಂದಿನ ತನಿಖೆಗಾಗಿ ಈ ಪ್ರಕರಣದ ಕಡತವನ್ನು ಚಾ.ಸಾ 6 ರವರಿಗೆ ಹಸ್ತಾಂತರಿಸಿರುತ್ತೇನೆ.

ಪಾಟೀ ಸವಾಲು ಆರೋಪಿ ಪರ ವಕೀಲರಾದ ಶ್ರೀ ವಿ.ಆರ್.ವಿ ರವರಿಂದಃ

ಆರೋಪಿಯನ್ನು ಗಸ್ತಗಿರಿ ಮಾಡಿದ ವಿಚಾರವನ್ನು ಅವರ ಸೊಸೆಯಾದ ರಾಜಲಕ್ಷ್ಮೀ ರವರಿಗೆ ತಿಳಿಸಿರುತ್ತೇನೆ. ಸದರಿ ವಿಚಾರವನ್ನು ನನ್ನ ಇಲಾಖಾ ಡೈರಿಯಲ್ಲಿ ನಮೂದು ಮಾಡಿರುತ್ತೇನೆ. ಸದರಿ ಇಲಾಖಾ ಡೈರಿಯನ್ನು ಅಂತಿಮ ವರದಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರಲಿಲ್ಲ. ಮುದ್ದೆ ಮಾಲುಗಳನ್ನು ಆರೋಪಿಯಿಂದ ವಶಪಡಿಸಿಕೊಂಡಿದ್ದೇವೆ ಎಂದು ಹೇಳಿದ್ದು ಅದಕ್ಕೆ ಸಂಬಂಧಪಟ್ಟಂತೆ ಆರೋಪಿಗೆ ಯಾವುದಾದರೂ ರಸೀದಿಯನ್ನು ನೀಡಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ಆ ರೀತಿ ರಸೀದಿ ನೀಡುವ ಪ್ರಕ್ರಿಯೆ ಇರುವುದಿಲ್ಲ ಆದರೆ ವಶಪಡಿಸಿಕೊಂಡ ಬಗ್ಗೆ ಆರೋಪಿಯ ಗಮನಕ್ಕೆ ತಂದಿದ್ದೇವೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಯಾವುದೇ ಒಂದು ವಸ್ತುವನ್ನು ವಶಪಡಿಸಿಕೊಳ್ಳುವಾಗ ರಸೀದಿಯನ್ನು ನೀಡಬೇಕಾಗುತ್ತದೆ ಆದರೆ ಈ

ಪ್ರಕರಣದಲ್ಲಿ ಮುದ್ದೆ ಮಾಲುಗಳನ್ನು ಆರೋಪಿಯಿಂದ ವಶಪಡಿಸಿಕೊಳ್ಳದ ಕಾರಣ ಆರೋಪಿಗೆ ರಸೀದಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿದ ಎಷ್ಟು ದಿನಗಳ ನಂತರ ಅಂತಿಮ ವರದಿಯನ್ನು ಸಲ್ಲಿಸಿರುವಿರಿ ಎಂಬ ಪ್ರಶ್ನೆಗೆ ಸಾಕ್ಷಿ ಈ ಪ್ರಕರಣದಲ್ಲಿ ನಾನು ವರ್ಗಾವಣೆಯಾದ ಕಾರಣ ಕಡತವನ್ನು ಚಾ.ಸಾ 6 ರವರಿಗೆ ನೀಡಿದ್ದು ಎಷ್ಟು ದಿನಗಳ ನಂತರ ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ ಎಂಬುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಆ ದಿನ ನ್ಯಾಯಾಲಯದಿಂದ ಶೋಧನಾ ವಾರೆಂಟ್ ಅನ್ನು ಪಡೆಯಲು ತೊಂದರೆ ಇತ್ತೆ ಎಂಬ ಪ್ರಶ್ನೆಗೆ ಸಾಕ್ಷಿ ಆ ದಿನ ನಾವು ಗಸ್ತು ಕಾರ್ಯದಲ್ಲಿದ್ದಾಗ ಖಚಿತ ಮಾಹಿತಿ ಬಂದಿದ್ದು ನ್ಯಾಯಾಲಯದಿಂದ ಶೋಧನಾ ವಾರೆಂಟ್ ಅನ್ನು ಪಡೆಯಲು ಸಮಯಾವಕಾಶ ಇಲ್ಲದಿದ್ದ ಕಾರಣ ಕರ್ನಾಟಕ ಅಬಕಾರಿ ಕಾಯ್ದೆ ಯ ಕಾಲಂ 54 ರ ಅಡಿಯಲ್ಲಿ ಶೋಧನಾ ಮೆಮೊವನ್ನು ತಯಾರಿಸಿರುತ್ತೇವೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ರೆಕಾರ್ಡ್ ಆಫ್ ರಿಜನ್ಸ್ ಅನ್ನು ಮಧ್ಯಾಹ್ನ 01.00 ಗಂಟೆಯಿಂದ 02.20 ರ ಮಧ್ಯದಲ್ಲಿ ಬರೆದಿರುತ್ತೇವೆ. ಮುದ್ದೆ ಮಾಲುಗಳನ್ನು ನ್ಯಾಯಾಲಯದ ಅನುಮತಿ ಪಡೆದ ನಂತರ ವಶಪಡಿಸಿಕೊಳ್ಳಲು ತೊಂದರೆ ಇತ್ತೆ? ಎಂಬ ಪ್ರಶ್ನೆಗೆ ಸಾಕ್ಷಿ ಅಬಕಾರಿ ಕಾಯ್ದೆ ಯಡಿ ನ್ಯಾಯಾಲಯದ ಅನುಮತಿ ಪಡೆಯದೆ ಮುದ್ದೆ ಮಾಲುಗಳನ್ನು ವಶಪಡಿಸಿಕೊಳ್ಳುವ ಅಧಿಕಾರ ನಮಗೆ ಇದೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಅನುಮತಿ ಇಲ್ಲದೆ ಹಾಗೂ ಶೋಧನಾ ವಾರೆಂಟ್ ಪಡೆಯದೆ ಮುದ್ದೆ ಮಾಲುಗಳನ್ನು ವಶಪಡಿಸಿಕೊಳ್ಳಲು ಅಥವಾ ಒಂದು ಸ್ಥಳವನ್ನು ಶೋಧಿಸಲು ನಮಗೆ ಯಾವುದೇ ಅಧಿಕಾರ ಇರುವುದಿಲ್ಲ ಹಾಗೂ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಮುದ್ದೆ ಮಾಲು 1 ರಿಂದ 34 ರ ಟೆಟ್ರಾ ಪ್ಯಾಕೆಟ್ ಗಳನ್ನು ಯಾವ ಅಂಗಡಿಯಿಂದ ಖರೀದಿಸಲಾಗಿದೆ ಎಂಬುದನ್ನು ಆರೋಪಿಯ ಬಳಿ ನಾವು ವಿಚಾರಣೆ ಮಾಡಿರುವುದಿಲ್ಲ. ಮುದ್ದೆ ಮಾಲುಗಳನ್ನು ಖರೀದಿಸಿದ ಅಂಗಡಿಯ ಮಾಲೀಕರನ್ನು ಈ ಪ್ರಕರಣದಲ್ಲಿ ಸಾಕ್ಷಿಯಾಗಿ ಸೇರಿಸಲು ತೊಂದರೆ ಇತ್ತೆ? ಎಂಬ ಪ್ರಶ್ನೆಗೆ ಸಾಕ್ಷಿ ಆ ಪ್ರಕ್ರಿಯೆಯನ್ನು ತನಿಖಾ ಅಧಿಕಾರಿಗಳು ಕೈಗೊಳ್ಳುತ್ತಾರೆ ಎಂದು ನುಡಿಯುತ್ತಾರೆ. ಮುದ್ದೆ ಮಾಲುಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಕಳುಹಿಸುವ ಮುನ್ನ ಮುದ್ದೆ ಮಾಲುಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕವಾದ ಪಂಚನಾಮೆಯನ್ನು ಜರುಗಿಸಿರುವುದಿಲ್ಲ. ನಾನು ಮುದ್ದೆ ಮಾಲುಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಕಳುಹಿಸುವಾಗ ಸದರಿ ಟೆಟ್ರಾ ಪ್ಯಾಕೆಟ್ ಗಳು ಖಾಲಿ

ಇರಲಿಲ್ಲ. ಹೊರ ಜಾಗದಲ್ಲಿ ಬಿದ್ದಿದ್ದ ಖಾಲಿ ಇರುವ ಟೆಟ್ರಾ ಪ್ಯಾಕೆಟ್ ಗಳನ್ನು ಈ ಪ್ರಕರಣಕ್ಕಾಗಿ ಸಂಗ್ರಹಿಸಿ ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಭಾಗಶಃ ತನಿಖಾಧಿಕಾರಿ ಎಂದರೆ ಸರಿ.

ನಾನು ಈ ಪ್ರಕರಣದಲ್ಲಿ ತನಿಖೆಯನ್ನು ನಡೆಸಿದ ದಿನಗಳ ವಿಚಾರಗಳನ್ನು ಇಲಾಖಾ ಡೈರಿಯಲ್ಲಿ ನಮೂದು ಮಾಡಿದ್ದು ಅದನ್ನು ಹಾಜರುಪಡಿಸಲು ನನಗೆ ತೊಂದರೆ ಇರಲಿಲ್ಲ. ನಾನು ಯಾವುದೇ ಇಲಾಖಾ ಡೈರಿಯಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟ ವಿಚಾರಗಳನ್ನು ನಮೂದಿಸದ ಕಾರಣ ಸದರಿ ಡೈರಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ದಿನಾಂಕ 29-09-2018 ರಂದು ಸಾಕ್ಷಿಗಳ ಹೇಳಿಕೆಗಳನ್ನು ನನ್ನ ಕಛೇರಿಯಲ್ಲಿ ಪಡೆದುಕೊಂಡಿರುತ್ತೇನೆ. ನಾನು ಒಟ್ಟು 4 ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಾನು ಅಶ್ವಿನಿ, ಹೆಚ್.ಎಲ್ ವೆಂಕಟೇಶ್ ಹಾಗೂ ವೆಂಕಟೇಶ್ ರವರ ಹೇಳಿಕೆಗಳನ್ನು ಪಡೆದಿರುತ್ತೇನೆ, ಮತ್ತೊಬ್ಬರ ಹೆಸರು ನನಗೆ ನೆನಪಿಲ್ಲ. ಅಶ್ವಿನಿ ಎಂಬುವವರು ಅಬಕಾರಿ ಪೇದೆ ಆಗಿರುತ್ತಾರೆ. ಅಶ್ವಿನಿರವರ ಹೇಳಿಕೆಯಲ್ಲಿ ಅವರು ಅಬಕಾರಿ ಕಛೇರಿಯ ವಾಹನ ಚಾಲಕ ಎಂದು ಬರೆದಿದ್ದು ಅದು ಅವರ ಹೇಳಿಕೆಯಾಗಿರುವುದಿಲ್ಲ ಹಾಗೂ ಅದನ್ನು ನಾನು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳ ಮೇಲೆ ಇಲಾಖಾ ಮೊಹರನ್ನು ವಶಪಡಿಸಿಕೊಂಡ ಸ್ಥಳದಲ್ಲಿಯೇ ಹಾಕಿರುತ್ತೇವೆ. ಈ ಪ್ರಕರಣದಲ್ಲಿ ಘಟನೆ ನಡೆದಿದೆ ಎಂದು ಹೇಳುವ ಸ್ಥಳದ ಚೆಕ್ಕುಬಂದಿ ನನಗೆ ನೆನಪಿಲ್ಲ. ನಾನು ಘಟನೆ ನಡೆದ ಸ್ಥಳಕ್ಕೆ ಹೋಗದ ಕಾರಣ ಅದರ ಚೆಕ್ಕುಬಂದಿ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ಆ ದಿನ ನಾವು ಗಸ್ತು ಕಾರ್ಯಕ್ಕಾಗಿ ಬೆಳಗ್ಗೆ ಸುಮಾರು 10.00 ಗಂಟೆಗೆ ಕಛೇರಿಯಿಂದ ಹೊರೆಟೆವು.ಆ ದಿನ ನಮ್ಮ ಕಛೇರಿಯಿಂದ ನನ್ನನ್ನು ಸೇರಿ 3 ಜನ ಹೊರಟೆವು. ನಾನು ಮತ್ತು ಚಾ.ಸಾ 1 ಹಾಗೂ 2 ರವರು ಒಂದೇ ಇಲಾಖೆಯವರಾಗಿದ್ದು ಆರೋಪಿಗೆ ತೊಂದರೆ ನೀಡಲು ಈ ಸುಳ್ಳು ಪ್ರಕರಣವನ್ನು ಸೃಷ್ಠಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಪಂಚರನ್ನು ಹೊಸೂರು ಬಸ್ ನಿಲ್ದಾಣದ ಬಳಿ ಸಹಕರಿಸಲು ಕೋರಿದ್ದು ಅದರಲ್ಲಿ ಒಬ್ಬರ ಹೆಸರು ವೆಂಕಟೇಶ್ ಹಾಗೂ ಮತ್ತೊಬ್ಬರ ಹೆಸರು ನನಗೆ ನೆನಪಿಲ್ಲ.

ಆರೋಪಿಯು ಅಂಗಡಿಯನ್ನು ನಡೆಸುತ್ತಿದ್ದಾರೆ ಎಂದು ತೋರಿಸಲು ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ಅದನ್ನು ತನಿಖಾಧಿಕಾರಿಗಳು ಹಾಜರುಪಡಿಸಬೇಕು ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ಪಡೆದುಕೊಂಡು ಹಾಜರುಪಡಿಸಲು ತೊಂದರೆ ಇತ್ತೆ? ಎಂಬ ಪ್ರಶ್ನೆಗೆ ಸಾಕ್ಷಿ ಆ ಸಂದರ್ಭದಲ್ಲಿ

ನನಗೆ ಸಮಯಾವಕಾಶ ಇರಲಿಲ್ಲ ಹಾಗೂ ಕಡತವನ್ನು ಮುಂದಿನ ತನಿಖೆಗಾಗಿ ಹಸ್ತಾಂತರಿಸಿದೆನು ಎಂದು ನುಡಿಯುತ್ತಾರೆ. ನಾವು ಸ್ಥಳಕ್ಕೆ ಹೋಗದೆ ಕಛೇರಿಯಲ್ಲಿಯೇ ಕುಳಿತು ನಿಪಿ-1 ರ ಪಂಚನಾಮೆಯನ್ನು ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ರ ಪಂಚನಾಮೆಯನ್ನು ಚಾ.ಸಾ 1 ರವರು ಬರೆದರು. ಘಟನೆ ನಡೆದಿದೆ ಎಂಬ ದಿನದಂದು ನಾನು ಯಾವುದೇ ಗಸ್ತು ಕಾರ್ಯ ಅಥವಾ ಅಂಗಡಿಯ ಬಳಿ ಹೋಗಿರುವುದಿಲ್ಲ ಹಾಗೂ ಈ ಸುಳ್ಳು ಪ್ರಕರಣವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪನ್ನು ಮಾಡದಿದ್ದರೂ ಸಹ ನಮ್ಮ ಇಲಾಖೆಯವರು ಸೇರಿ ಸುಳ್ಳು ಪ್ರಕರಣವನ್ನು ಸೃಷ್ಠಿಸಿ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿಗಳ ಹೇಳಿಕೆಗಳನ್ನು ಪಡೆದಿಲ್ಲ ಹಾಗೂ ಆರೋಪಿಗೆ ತೊಂದರೆ ನೀಡಲು ಈ ಸುಳ್ಳು ಪ್ರಕರಣವನ್ನು ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ನೀಡಲು ಖಾಲಿ ಟೆಟ್ರಾ ಪ್ಯಾಕೆಟ್ ಗಳನ್ನು ಸಂಗ್ರಹಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು